**SC No. 109/2016**
**P.W. 25**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 109/2016 P.W. 25**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **10.02.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಆದೇಶ ದಿನಾಂಕ **09.02.2026** ರಂತೆ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ವಕೀಲರಿಂದ :</u>

1. ನಾನು ಪ್ರ.ವ.ವ. ಮತ್ತು ದೂರನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳನ್ನು ಫ್ರಾಸಾ. 21 ರವರಿಗೆ ಪಡೆದುಕೊಂಡಿಲ್ಲ ಎಂದರೆ ಸರಿ. ಪ್ರ.ವ.ವ. ಪ್ರಕಾರ ಲಿಖಿತ ದೂರು ಪಡೆದುಕೊಂಡ ಬಗ್ಗೆ ವರದಿಯಾಗಿದೆ ಎಂದರೆ ಸರಿ. ಸದರಿ ದೂರನ್ನು ಪಿರ್ಯಾದಿಯಿಂದ ಪಡೆದುಕೊಂಡಿದ್ದಾರೆ. ಮೊದಲು ಫೋನ್ ಮೂಲಕ ಮಾಹಿತಿ ಬಂದಿದ್ದು ನಂತರ ಸ್ಥಳಕ್ಕೆ ಹೋಗಿ ದೂರನ್ನು ಪಡೆದುಕೊಂಡಿದ್ದಾರೆ. ಸೆಕ್ಯೂರಿಟಿ ಇನ್ ಚಾರ್ಜ್ ರವರು ಫೋನ್ ಮಾಡಿದ್ದು ಪಿ.ಎಸ್‌ಐ. ರವರು ಸ್ಥಳಕ್ಕ ಹೋಗಿದ್ದಾರೆ. ಪಿರ್ಯಾದಿಯ ಸಹಿ ದೂರಿನಲ್ಲಿ ಇರುತ್ತದೆ. ಪ.ವ.ವ. ಯಲ್ಲಿ ಇರುವ ಪಿರ್ಯಾದಿಯ ಸಹಿ ಮತ್ತು ದೂರಿನಲ್ಲಿ ಇರುವ ಪಿರ್ಯಾದಿಯ ಸಹಿ ಹೊಂದಾಣಿಕೆ ಇಲ್ಲ ಎಂದರೆ ಸರಿ ಅಲ್ಲ. ಪಿರ್ಯಾದಿ ಮೃತಳ ಜೊತೆ ಒಂದೇ ಅಪಾರ್ಟಮೆಂಟ್ ನಲ್ಲಿ ವಾಸ ಇದ್ದರು. ಪಿರ್ಯಾದಿಯು ಮಾಹಾವೀರ್ ಅಪಾರ್ಟಮೆಂಟ್ ಯಾವುದೇ ಪ್ಲಾಟ್ ನಲ್ಲಿ ಬಾಡಿಗೆಗೆ ಇರಲಿಲ್ಲ ಎಂದರೆ ಸರಿ ಅಲ್ಲ. ಪಿರ್ಯಾದಿ ದಿನಾಂಕ 19.01.2016 ರಂದು ಕೇವಲ ಆ ಅಪಾರ್ಟಮೆಂಟ್ ಗೆ ಭೇಟಿ ನೀಡಿದ್ದರು ಎಂದೆರ ಸರಿ ಅಲ್ಲ. ಮೃತಳು ತನ್ನ ತಾಯಿಯ ಜೊತೆಗೆ ಅಪಾರ್ಟಮೆಂಟ್ ನಲ್ಲಿ ವಾಸ ಇದ್ದು ಹಾಗು ಚಾಸಾ. 12 ರವರು ಆಗಾಗ ಭೇಟಿ ನೀಡುತ್ತಿದ್ದರು ಎಂದರೆ ಸರಿ ಅಲ್ಲ. ಆರೋಪಿಯನ್ನು ಈ ಕೇಸಿನಲ್ಲಿ ಸಿಲುಕಿಸುವ ಸಲುವಾಗಿ ಪಿರ್ಯಾದಿಯನ್ನು ಆ ಅಪಾರ್ಟಮೆಂಟ್ ನ ಬಾಡಿಗೆದಾರರು ಎಂದು ತೋರಿಸಿದ್ದೇವೆ ಎಂದರೆ ಸರಿ ಅಲ್ಲ.

2. ಚಾಸಾ. 2 ರವರು Facility Manager, ಚಾಸಾ. 4 ರವರು STP Maintenance and ಚಾಸಾ. 5 ರವರು Security Supervisor ಇದ್ದಾರೆ. ನಾನು ಚಾಸಾ. 2, 4 ಮತ್ತು 5 ಆ ಅಪಾರ್ಟಮೆಂಟ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ.

ಚಾಸಾ. 2, 4 ಮತ್ತು 5 ಸದರಿ ಅಪಾರ್ಟಮೆಂಟ್ ನಲ್ಲಿ ಕೆಲಸ ಮಾಡುತ್ತಿರಲಿಲ್ಲ ಹಾಗೂ ಹೊರಗಿನವರು ಎಂದರೆ ಸರಿ ಅಲ್ಲ. ನಾನು ಯಾವತ್ತೂ ಆ ಅಪಾರ್ಟಮೆಂಟ್ ಭೇಟಿ ನೀಡಿಲ್ಲ ಎಂದರೆ ಸರಿ ಅಲ್ಲ. ಸ್ಥಳ ಮಹಜರ್ ಅನು ಠಾಣೆಯಲ್ಲಿ ತಯಾರು ಮಾಡಿ ಅಲ್ಲೇ ಸಾಕ್ಷಿಗಳ ರುಜು ಪಡೆದಿದ್ದೇನೆ ಎಂದರೆ ಸರಿ ಅಲ್ಲ. ಮೃತಳ ಶವ ಮಖಾಡೆ ಯಾಗಿ ಬಿದ್ದಿತ್ತು ಎಂದರೆ ಸರಿ ಅಲ್ಲ. ಮೃತದೇಹದ ಅಕ್ಕ ಪಕ್ಕ ಹಾಗೂ ಬಟ್ಟೆಗಳ ಮೇಲೆ ರಕ್ತವಾಗಿತ್ತು ಎಂದರೆ ಸರಿ. ನಾವು ಅಂತಿಮ ವರದಿಯ ಪ್ರಕಾರ ಸ್ಥಳದಿಂದ ಕುರ್ಚಿಯನ್ನು ವಶಕ್ಕೆ ಪಡೆದಿದ್ದೆವು ಎಂದರೆ ಸರಿ. ಆ ಕುರ್ಚಿಯ ಮೇಲೆ ರಕ್ತದ ಕಲೆಯಾಗಿತ್ತು ಎಂದರೆ ಸರಿ. ನಿಶಾನೆ.ಪಿ. 8 ಮತ್ತು 9 ರ ಫೋಟೋಗಳಲ್ಲಿ ಮು.ಮಾ.3 (ಕುರ್ಚಿ) ಕಾಣಿಸುತ್ತಿಲ್ಲ ಎಂದರೆ ಸರಿ. ಆ ಕುರ್ಚಿ ಶವದ ಅಕ್ಕ ಪಕ್ಕ ಇರಲಿಲ್ಲ ಎಂದರೆ ಸರಿ. ನಾನು ಸ್ಥಳದಿಂದ ಒಂದು ಕುರ್ಚಿಯನ್ನು ವಶಕ್ಕೆ ಪಡೆದಿದ್ದೇನೆ. ನನ್ನ ತನಿಖೆ ಪ್ರಕಾರ ಮೊದಲು ಲ್ಯಾಪ್ ಟಾಪ್ ವೈರ್ ನಿಂದ ಕುತ್ತಿಗೆ ಬಿಗಿದಿದ್ದು ನಂತರ ಕುರ್ಚಿಯಿಂದ ಹಲ್ಲೆ ಮಾಡಿರುವ ಬಗ್ಗೆ ಕಂಡು ಬಂತು. ನಿಶಾನೆ.ಪಿ. 8 ಮತ್ತು 9 ರ ಫೋಟೋಗಳಲ್ಲಿ ಮು.ಮಾ.1 ಅದೇ ಲ್ಯಾಪ್ ಟಾಪ್ ವೈರ್ ಕಾಣಿಸುತ್ತಿದೆ. ಮುಮಾ. 1 ರಲ್ಲಿ ರಕ್ತದ ಕಲೆ ಕಾಣಿಸುತ್ತಿಲ್ಲ ಎಂದರೆ ಸರಿ ಅಲ್ಲ. ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸುವ ಮೊದಲು ಮು.ಮಾ. 1 ಅನ್ನು ಮೃತದೇಹದಿಂದ ತೆಗೆದಿದ್ದೆ. ಮರಣೋತ್ತರ ಪರೀಕ್ಷೆ ಕಾಲಕ್ಕೆ ಮು.ಮಾ. 1 ಅನ್ನು ಕಳುಹಿಸಿರಲಿಲ್ಲ. ನಂತರದಲ್ಲಿ ವೈದ್ಯರ ಅಭಿಪ್ರಾಯಕ್ಕಾಗಿ ಮು.ಮಾ. 1 ಅನ್ನು ಕಳುಹಿಸಿರಬಹುದು. ನಿಶಾನೆ.ಪಿ. 7 ಫೋಟೋವನ್ನು ಯಾರಿಂದ ಪಡೆದುಕೊಂಡಿದ್ದು ಎಂದು ನಮೂದು ಮಾಡಿಲ್ಲ ಎಂದರೆ ಸರಿ.

3. ಚಾಸಾ. 12 ರವರು ದಿನಾಂಕ 19.01.2016 ರಂದು ಮೃತಳನ್ನು ಅಪಾರ್ಟಮೆಂಟ್ ನಲ್ಲಿ ಭೇಟಿಯಾಗಿದ್ದ ಎಂದರೆ ಸರಿ ಅಲ್ಲ. ದಿನಾಂಕ 20.01.2016 ರಂದು ಶವವನ್ನು ವೈದೇಹಿ ಆಸ್ಪತ್ರೆಯವರು ಶವವನ್ನು ಪಡೆದುಕೊಂಡ ಬಗ್ಗೆ ಯಾವುದೇ ದಾಖಲ ಇರುವುದಿಲ್ಲ ಎಂದರೆ ಸರಿ ಅಲ್ಲ. ಮಹಾವೀರ್ ಕಿಂಗ್ಸ ಅಪಾರ್ಟ್‌ಮೆಂಟ್ ನಲ್ಲಿ ಎಷ್ಟು ಅಂತಸ್ಥುಗಳು ಇದ್ದವು ಎಂದು ನೆನಪಿಲ್ಲ. ಒಂದು ಅಂತಸ್ಥಿನಲ್ಲಿ 4 ಪ್ಲಾಟ್ ಗಳು ಇವೆ. ಸದರಿ ಅಪಾರ್ಟಮೆಂಟ್ ನಲ್ಲಿ ಸಿ.ಸಿ.ಟಿ.ವಿ. ಕ್ಯಾಮಾರಗಳು ಇವೆ. ನಾನು ಸಿ.ಸಿ.ಟಿ.ವಿ. ದೃಶ್ಯವಳಿಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲ. ನಾವು ಖಾಲಿ ಸಿ.ಡಿ.ಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ ಎಂದರೆ ಸರಿ ಅಲ್ಲ. ನಿಶಾನೆ.ಪಿ. 5 ರಲ್ಲಿ ಆರೋಪಿ ದಿನಾಂಕ 19.01.2016 ರಂದು ಆ ಅಪಾರ್ಟಮೆಂಟ್ ಗೆ ಭೇಟಿ ನೀಡಿದ ಬಗ್ಗೆ ಇರುವ ಮಾಹಿತಿಯನ್ನು

ಸೃಷ್ಟಿಸಿದ್ದೇವೆ ಎಂದರೆ ಸರಿ ಅಲ್ಲ. ನಂತರದಲ್ಲಿ ಆರೋಪಿಯ ಹೆಸರನ್ನು ನಿಶಾನೆ.ಪಿ. 5 ಕ್ಕೆ ಸೇರಿಸಿದ್ದೇನೆ ಎಂದರೆ ಸರಿ ಅಲ್ಲ. ದಿನಾಂಕ 20.01.2016 ರಂದು ನಿಶಾನೆ.ಪಿ. 5 ಅನ್ನು ಜಪ್ತಿ ಮಾಡಿದ್ದೇವೆ. ಸದರಿ ಮಹಜರ್ ಅನ್ನು ಬೆಳಗಿನ ಜಾವ 3.00 ರಿಂದ 4.00 ಗಂಟೆಯಲ್ಲಿ ಮಾಡಿದ್ದು ಆ ಸಮಯದಲ್ಲಿ ನಿಶಾನೆ.ಪಿ. 5 ಅನ್ನು ಜಪ್ತಿ ಮಾಡಿದ್ದೇವೆ. ನಿಶಾನೆ.ಪಿ. 5 ರಲ್ಲಿ ಆರೋಪಿತನ ಸಹಿ ಇರುವುದಿಲ್ಲ ಎಂದರೆ ಸರಿ ಅಲ್ಲ. ನಿಶಾನೆ.ಪಿ. 5 ರಲ್ಲಿ ಇರುವ ಆರೋಪಿತನ ಸಹಿ ಆತನ ಒಪ್ಪಿತ ಸಹಿಗೆ ತಾಳೆಯಾಗುವುದಿಲ್ಲ ಎಂದರೆ ಸರಿ ಅಲ್ಲ.

4. ನಿಶಾನೆ.ಪಿ. 5 ರಲ್ಲಿ ಆರೋಪಿತನ ಹಳೆಯ ನಂಬರ ಅನ್ನು ನಮೂದು ಮಾಡಿದ್ದು, ನಿಶಾನೆ.ಪಿ. 35 ಮತ್ತು 36 ರಲ್ಲಿ ಹೊಸ ನಂಬರ್ ಇರುತ್ತದೆ. ನಿಶಾನೆ.ಪಿ. 5 ರಲ್ಲಿ ಇರುವ ನಂಬರ್ ಆರೋಪಿಗೆ ಸಂಬಂಧ ಪಟ್ಟಿದ್ದು ಎಂದು ತಿಳಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನಿಶಾನೆ.ಪಿ. 5 ರಲ್ಲಿ ನಮೂದಿಸಿರುವ ಮೊಬೈಲ್ ನಂಬರ್ ಅಸ್ತಿತ್ವದಲ್ಲಿ ಇಲ್ಲ ಹಾಗೂ ಆರೋಪಿಗೆ ಸಂಬಂಧ ಪಟ್ಟಿದ್ದಲ್ಲ ಎಂದರೆ ಸರಿ ಅಲ್ಲ. ಎಲ್ಲಾ ಸಂದರ್ಶಕರ ಮಾಹಿತಿಯನ್ನು ನಿಶಾನೆ.ಪಿ. 5 ರಲ್ಲಿ ನಮೂದು ಮಾಡಿಲ್ಲ ಮತ್ತು ಕೆಲವರ ಮಾಹಿತಿಯನ್ನು ಮಾತ್ರ ನಮೂದು ಮಾಡಿದ್ದೇವೆ ಎಂದರೆ ಸರಿ ಅಲ್ಲ. ಚಾಸಾ. 23 ಮತ್ತು 24 ರವರು ಯಾವತ್ತೂ ಮಹಾವೀರ್ ಕಿಂಗ್ಸ್ ಅಪಾಟ್ಟಮೆಂಟ್ ನಲ್ಲಿ 2015 - 2016 ರಲ್ಲಿ ವಾಸ ಇರಲಿಲ್ಲ ಎಂದರೆ ಸರಿ ಅಲ್ಲ. ಚಾಸಾ. 23 ಮತ್ತು 24 ರವರು ಆ ಅಪಾರ್ಟ್ ಮೆಂಟ್ ನಲ್ಲಿ ವಾಸ ಇದ್ದ ಬಗ್ಗೆ ಯಾುವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ ಅಲ್ಲ. ಆ ಅಪಾರ್ಟ್ ಮೆಂಟ್ ನಲ್ಲಿ ವಾಸ ಇರುವವರ ನಿಶಾನೆ.ಪಿ. 5 ರಲ್ಲಿ ಯಾವುದೇ ನಮೂದು ಮಾಡದೇ ಹೋಗಿ ಬರಬಹುದು ಎಂದರೆ ಸರಿ. ಯಾರಾದರೂ ಸಂದರ್ಶಕರು ಅಪಾರ್ಟ್ ಮೆಂಟ್ ಗೆ ಬಂದಾಗ ಸೆಕ್ಯೂರಿಟಿ ಗಾರ್ಡಗಳು ಸಂಬಂಧಪಟ್ಟ ಪ್ಲಾಟ್ ಗೆ ಕರೆದುಕೊಂಡು ಹೋಗುವುದಿಲ್ಲ ಎಂದರೆ ಸರಿ. ಆ ಅಪಾರ್ಟ್ ಮೆಂಟ್ ಒಳಗೆ ಬಂದವರು ಯಾರು ಬೇಕಾದರೂ ಮತ್ತು ಅಪಾರ್ಟ್ ಮೆಂಟ್ ವಾಸಿಗಳು ಸಹ ಯಾರು ಬೇಕಾದರೂ ಪ್ಲಾಟ್ ನಂ. 507 ಕ್ಕೆ ಹೋಗಬಹುದು ಎಂದರೆ ಸರಿ. ನಾನು ಆ ಅಪಾರ್ಟ್ ಮೆಂಟ್ ನಲ್ಲಿ ಯಾವುದೇ ಫಿಂಗರ್ ಪ್ರಿಂಟ್ಸ್ ಇಲ್ಲದೇ ಇದ್ದುದ್ದರಿಂದ ತೆಗೆದುಕೊಳ್ಳಲು ಪ್ರಯತ್ನ ಮಾಡಿಲ್ಲ. ಅಲ್ಲಿ ಯಾವುದೇ ಆಕಸ್ಮಿಕ ಬೆರಳು ಮುದ್ರೆ ಕಂಡು ಬರದೇ ಇದ್ದುದ್ದರಿಂದ ಬೆರಳು ಮುದ್ದೆ ತಜ್ಞರನ್ನು ಕರೆಯಿಸಿ ಪರೀಕ್ಷೆ ಮಾಡಿಸಿಲ್ಲ.

**SC No. 109/2016**
**P.W. 25**

5. ಮು.ಮಾ. 1 ರಿಂದ 3 ಮತ್ತು 14 ಅನ್ನು ಬೆರಳು ಮುದ್ರೆ ತಜ್ಞರಿಗೆ ಕಳುಹಿಸಿಲ್ಲ ಎಂದರೆ ಸರಿ. ಆ ವಸ್ತುಗಳ ಮೇಲೆ ಆರೋಪಿಯ ಬೆರಳಚ್ಚು ಇರಲಿಲ್ಲ ಎಂದರೆ ಸಾಕ್ಷಿಯು ಅವುಗಳ ಮೇಲೆ ಬೆರಳು ಮುದ್ರೆ ಸಾಧ್ಯತೆಗಳು ಇರುವುದಿಲ್ಲ. ಅದೇ ರೀತಿ ಮು.ಮಾ. 16 ರಿಂದ 18, 20 ರಿಂದ 22 ರಲ್ಲಿ ಆರೋಪಿಯ ಬೆಳರಳಚ್ಚು ಇರಲಿಲ್ಲ ಎಂದರೆ ಸರಿ. ನನಗೂ ಸಹ ಬೆಳರಚ್ಚು ಕಂಡು ಹಿಡಿಯುವಲ್ಲಿ ತರಬೇತಿಯಾಗಿದ್ದು ಆ ಕಾರಣದಿಂದ ಅಲ್ಲಿ ಬೆರಳಚ್ಚು ಇಲ್ಲದೇ ಇದ್ದುದ್ದರಿಂದ ನಾನು ಬೆಳರಚ್ಚು ತಜ್ಞರನ್ನು ಕರೆಸಿಲ್ಲ. ಪ್ಲಾಟ್ ನಂ. 507 ರ ಸುತ್ತ ಮುತ್ತ ಪ್ಲಾಟ್ ವಾಸಿಗಳ ಹೇಳಿಕೆಗಳನ್ನು ನಾನು ಮಾಡಿಕೊಂಡಿಲ್ಲ. ಪ್ಲಾಟ್ ನಂ. 507 ರ ಸುತ್ತ ಮುತ್ತ ಪ್ಲಾಟ್ ವಾಸಿಗಳು ಅಥವ ಸೆಕ್ಯೂರಿಟಿಯವರು ಆರೋಪಿ ಬಂದು ಹೋದ ಬಗ್ಗೆ ಹೇಳಿಕೆ ಪಡೆದಿಲ್ಲ ಎಂದರೆ ಸರಿ ಅಲ್ಲ. ಮೃತಳೇ ಬಂದು ಆರೋಪಿಯನ್ನು ಸೆಕ್ಯೂರಿಟಿ ಗೇಟ್ ನಿಂದ ಒಳಗೆ ಕರೆದುಕೊಂಡು ಹೋಗಿದ್ದರು ಎಂದು ಹೇಳುತ್ತಾರೆ. ಆರೋಪಿ ಪ್ಲಾಟ್ ನಂ. 507 ರ ಒಳಗೆ ಹೋಗಿ ಹೊರಗೆ ಬಂದ ಬಗ್ಗೆ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿ ಅಲ್ಲ. ಚಾಸಾ. 2, 5 ಮತ್ತು 6 ರವರು ಈ ಬಗ್ಗೆ ಹೇಳಿದ್ದಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ. 2, 5 ಮತ್ತು 6 ರವರು ಆರೋಪಿ ಪ್ಲಾಟ್ ನಂ. 507 ರ ಒಳಗೆ ಬಂದು ಹೋದ ಬಗ್ಗೆ ಹೇಳಿಲ್ಲ ಎಂದರೆ ಸರಿ ಅಲ್ಲ. ಆರೋಪಿ ಪ್ಲಾಟ್ ನಂ. 507 ರ ಒಳಗೆ ಬಂದು ಹೋದ ಬಗ್ಗೆ ಸಿ.ಸಿ.ಟಿ.ವಿ. ದೃಶ್ಯಾವಳಿ ಸಂಗ್ರಹಿಸಿಲ್ಲ ಎಂದರೆ ಸರಿ. ಚಾಸಾ. 12 ರವರವನ್ನು ನಾನು ಮೊದಲು ನನ್ನ ಕಸ್ಟಡಿಗೆ ತೆಗೆದುಕೊಂಡಿದ್ದು ನಂತರದಲ್ಲಿ ಆರೋಪಿಯನ್ನು ಈ ಪ್ರಕರಣದಲ್ಲಿ ಸೇರಿಸಿ ಚಾಸಾ. 12 ರವರನ್ನು ಬಿಟ್ಟಿದೆನೆ ಎಂದರೆ ಸರಿ ಅಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯ ಮುಂದುವರಿದ ಪಾಟೀ ಸವಾಲಿಗೆ ಮುಂದುಡಾಲಾಯಿತು)

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.